ಸಿವಿಲ್ ಮತ್ತು ಜೆಎಮ್ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

ಸಿಸಿ ನಂ.**1797/2024**

ಪಿರ್ಯಾದಿ : ಶ್ರೀ ತಿಮ್ಮಪ್ಪ ತಂದೆ ಹಣಮಂತ್ರಾಯ

ಆರೋಪಿ : ಶ್ರೀ ರಾಘವೇಂದ್ರ ತಂದೆ ಜಂಬಣ್ಣ ಡೊಳ್ಳೆ

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಅಡಿಯಲ್ಲಿ ಅರೋಪಿತನ ಹೇಳಿಕ

ಪ್ರಶ್ನೆಃ**1**ಃ ನೀವು ದೂರುದಾರರ ವಿಚಾರಣೆಯನ್ನು ಕೇಳಿದ್ದೀರಾ**?**

ಆರೋಪಿಯ ಉತ್ತರಃ

ಪ್ರಶ್ನೆ2 : ಫ್ರಾಸಾ-1 ಶ್ರೀ ತಿಮ್ಮಪ್ಪ ತಂದೆ ಹಣಮಂತ್ರಾಯ ಇವರು ಪಿರ್ಯಾದಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಅರೋಪಿಯಾದ ನೀವು ಸೈದಾಪೂರ ಮತ್ತು ಕೂಡ್ಲೂರು ಗ್ರಾಮದ ವ್ಯಾಪ್ತಿಯ ಜಮೀನುಗಳಲ್ಲಿ ಉದಯ ಗ್ರೀನ್ ಸಿಟಿ ಎಂಬ ಹೆಸರಿನಡಿಯಲ್ಲಿ ನಿವೇಶನಗಳನ್ನು ನಿರ್ಮಾಣ ಮಾಡಿ ಯೋಜನೆಯಡಿಯಲ್ಲಿ ಮಾರಾಟ ಮಾಡುವ ವ್ಯವಹಾರ ಮಾಡುತ್ತಿದ್ದು**,** ದೂರುದಾರ **1200** ಚದರ ಅಡಿ ಅಳತೆಯ ನಿವೇಶನ ಖರೀದಿಗಾಗಿ ಸಂಖ್ಯೆ **263** ಅಡಿಯಲ್ಲಿ ನಿಮ್ಮ ಯೋಜನೆಯ ಸದಸ್ಯತ್ವ ಪಡೆದು ದಿನಾಂಕ **15.05.2014** ರಿಂದ **17.02.2019** ರವರೆಗೆ ನಿಯಮದಂತೆ ಒಟ್ಟು **58** ಕಂತು ಪಾವತಿ ಮಾಡಿದ್ದು ಇರುತ್ತದೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆಃ 3 ಃ ಫ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಆ ನಂತರ ಪ್ರತಿ ತಿಂಗಳ ಲಕ್ಕಿ ಡಿಪ್ ಆಯ್ಕೆಯಲ್ಲಿ ದೂರುದಾರ ಆಯ್ಕೆಯಾಗಿದ್ದು ಯೊಜನೆಯ ನಿಯಮದಂತೆ ಮುಂದಿನ ಕಂತು ಪಾವತಿ ಮಾಡಿರುವುದಿಲ್ಲ**.** ಇದಕ್ಕೆ ಸಂಬಂಧಿಸಿದಂತೆ ನಿಮ್ಮ ಹಾಗೂ ದೂರುದಾರರನ ನಡುವೆ ದಿನಾಂಕ **17.10.2016** ರಂದು ಕರಾರು ಆಗಿದ್ದು**,** ಯೋಜನೆ ಅವದಿ ಮುಗಿದ ನಂತರ ನಿವೇಶನ ನೊಂದಣಿ ಮಾಡಿಕೊಡುವುದಾಗಿ ನೀವು ದೂರುದಾರನಿಗೆ ತಿಳಿಸಿದ್ದು ಇರುತ್ತದೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 4ಃ ಫ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಆದರೆ ನೀವು ಆ ಪ್ರಕಾರ ನಡೆದುಕೊಳ್ಳದ ಕಾರಣ ದೂರುದಾರ ನಿಮಗೆ ದಿನಾಂಕ **04.05.2024** ರಂದು ಕಾನೂನು ತಿಳುವಳಿಕೆ ಪತ್ರ ನೀಡಿದ್ದು**,** ಸದರಿ ಪತ್ರ ಜಾರಿಯಾದ ನಂತರ ನೀವು ದೂರದಾನಿಗೆ ನಿವೇಶನದ ಬದಲಾಗಿ ರೂ**.10,00,000/-** ಹಣ ನೀಡುವುದಾಗಿ ಒಪ್ಪಿಕೊಂಡು ದಿನಾಂಕ **22.07.2024** ರಂದು ನೀವು ಖಾತೆ ಹೊಂದಿರುವ ಹೆಚ್**.**ಡಿ**.**ಎಫ್**.**ಸಿ ಬ್ಯಾಂಕ್**,** ಯಾದಗಿರಿ ಶಾಖೆಗೆ ಸೇರಿದ **000012** ಸಂಖ್ಯೆಯ ಚೆಕ್ ನಲ್ಲಿ ರೂ**. 10,00,000/-** ಹಾಗೂ ದಿನಾಂಕ **05.08.2024** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದಿರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 5ಃ ಫ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಸದರಿ ಚೆಕ್‌ನ್ನು ಪಿರ್ಯಾದುದಾರರು ನಗದೀಕರಣಕ್ಕಾಗಿ ತಾವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ**,** ಸೈದಾಪುರ ಶಾಖೆಯ ಮೂಲಕ ಹಾಜರು ಪಡಿಸಿದಾಗ**, "Funds Insufficient"** ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **07.08.2024** ರಂದು ವಾಪಸ್ಸು ನೀಡಿರುತ್ತಾರೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 6ಃ ಫ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ **14.08.2024** ರಂದು ಅಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು**,** ಸದರಿ ನೋಟಿಸ್ ದಿನಾಂಕ **17.08.2024** ಜಾರಿಯಾಗಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್‌ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿ ಅಪರಾಧ ಎಸಗಿದ್ದೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ **7**ಃ ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಆರೋಪಿಯ ಉತ್ತರಃ

ಪ್ರಶ್ನೆ **8** ಃ ನಿಮ್ಮ ಪರ ಯಾವುದಾದರೂ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಆರೋಪಿಯ ಉತ್ತರಃ

**(**ಮೇಲ್ಕಂಡಂತೆ ಆಪಾದಿತರಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಪ್ರಶ್ನಿಸಿ, ಅವರು ನೀಡಿದ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ದಿನಾಂಕಃ 30.08.2025
ಸ್ಥಳಃ ಯಾದಗಿರಿ

ಸಿವಿಲ್ ಮತ್ತು ಜೆ ಎಂ ಎಫ ಸಿ
ನ್ಯಾಯಾಧೀಶರು,ಯಾದಗಿರಿ.